ಸಾಕ್ಷಿಯ ಹೆಸರು : ಜಮಾಲ್ ಸಾಬ ಇಬ್ರಾಹಿಂ ಸಾಬ ಶೇಖ

**ದಿನಾಂಕಃ 10–12–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

6. ಶ್ರೀಮತಿ ಹೀನಾ ಸಿಕಂದರ್ ಮತ್ತು ಆರೋಪಿಯ ಮನೆ ಅಕ್ಕ–ಪಕ್ಕದಲ್ಲಿರುತ್ತದೆ ಎಂದರೆ ಸರಿ. ಚಾಸಾ–15 ರವರು ಬಟ್ಟೆ ತೊಳೆಯುತ್ತಿದ್ದರು ಎಂದು ಹೇಳಲಾದ ಜಾಗದಲ್ಲಿ ಬಹಳಷ್ಟು ಗಿಡ–ಮರಗಳು ಇವೆ ಎಂದರೆ ಸಾಕ್ಷಿಯು ಬಹಳಷ್ಟು ಇರುವುದಿಲ್ಲ, ಆದರೆ ಸಣ್ಣಪುಟ್ಟ ಗಿಡಗಳು ಇರುತ್ತವೆ ಎಂದು ನುಡಿಯುತ್ತಾರೆ. ಎಂ.ಓ.–11 ಮೊಬೈಲಿನಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಕಾಣುವ ದೃಶ್ಯಾವಳಿಯಲ್ಲಿ ಯಾವುದೇ ವ್ಯಕ್ತಿ ಮನೆಗೆ ಹೋಗಿ ಚಾಕು ತಂದಿರುವುದು ಕಾಣುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ತೆಂಗಿನ ತೋಟ ಇರುವ ಮನೆಗಳಲ್ಲಿ ಕಾಯಿ ಸುಲಿಗೆ ಮಣೆ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೃತನು ತೆಂಗಿನಕಾಯಿಯನ್ನು ಸುಲಿಯಬೇಕಾದರೆ ಆಯ ತಪ್ಪಿ ಸುಲಿಗೆ ಮಣೆಯ ಮೇಲೆ ಬಿದ್ದು ಗಾಯವಾದ ಕಾರಣ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ.

7. ಮನೆಯ ಹಿತ್ತಲಿನ ವಿಚಾರವಾಗಿ, ಆರೋಪಿಯು ಚಾಸಾ–14 ರವರೊಂದಿಗೆ ಜಗಳವಾಡುತ್ತಿದ್ದ ಎಂದರೆ ಸಾಕ್ಷಿಯು ಜಗಳವಾಗುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ ಆದರೆ, ಆರೋಪಿಯ ವಿರುದ್ಧ ಚಾಸಾ–14 ರವರು ದೂರು ನೀಡಿದ ವಿಷಯ ನನಗೆ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯನ್ನು ಜೈಲಿನಲ್ಲಿಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಎಂ.ಓ.–11 ಮೊಬೈಲ್‌ನಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಕಾಣುವ ದೃಶ್ಯಾವಳಿಯಲ್ಲಿ ಯಾವುದೇ ಮನೆಗಳು ಕಾಣುವುದಿಲ್ಲ ಎಂದರೆ ಸರಿ. ಸದರಿ ದೃಶ್ಯಾವಳಿಯಲ್ಲಿ ಕಾಣುತ್ತಿರುವ ವ್ಯಕ್ತಿಗಳಲ್ಲಿ, ಆರೋಪಿಯೂ ಅಲ್ಲ ಹಾಗೂ ಮೃತನೂ ಅಲ್ಲ ಎಂದರೆ ಸಾಕ್ಷಿಯು ನಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಮೃತನು ನನ್ನ ಸ್ನೇಹಿತನಾಗಿದ್ದರಿಂದ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಎಂ.ಓ.–11 ಮೊಬೈಲ್‌ನಲ್ಲಿ ಗುರುತಿಸಿದ ದೃಶ್ಯಾವಳಿಯು ಈ ಘಟನೆಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಎಂ.ಓ.–2 ಚಾಕುವನ್ನು ಸಾಮಾನ್ಯವಾಗಿ ಮಾಂಸದ ಅಂಗಡಿಗಳಲ್ಲಿ

ಬಳಸುತ್ತಾರೆ ಎಂದರೆ ಸರಿಯಲ್ಲ. ಸದರಿ ಚಾಕು ಚಾಸಾ–21 ರವರ ಮಟನ್ ಅಂಗಡಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು, ಸದರಿ ಚಾಕುವನ್ನು ಆರೋಪಿಯೇ ತಂದಿರುತ್ತಾನೆ ಎಂದು ನುಡಿಯುತ್ತಾರೆ. ಮಸೀದಿಗೆ ಹೋಗಲು ಬೇರೆ ಬೇರೆ ಕಾಲೋನಿಯಿಂದ ಬೇರೆ ಬೇರೆ ದಾರಿಗಳಿವೆ ಎಂದರೆ ಸರಿ. ನನ್ನ ಮನೆಯಿಂದ ಮಸೀದಿಗೆ ಅರ್ಧ ಕಿ.ಮೀ ಇರುತ್ತದೆ. ಆರೋಪಿಯ ವಿರುದ್ಧ ಚಾಸಾ–14 ರವರನ್ನು ಹೊರತುಪಡಿಸಿ, ಬೇರೆ ಯಾವುದೇ ಮಹಿಳೆಯರಿಂದ ದೂರು ದಾಖಲಾಗಿರುವುದಿಲ್ಲ ಎಂದರೆ ಸರಿ. ಎಂ.ಓ.–11 ದೃಶ್ಯಾವಳಿಯಲ್ಲಿ ಮರ ಕತ್ತರಿಸಿರುವುದು ಕಂಡುಬರುತ್ತದೆ ಎಂದರೆ ಸರಿ. ಅದೇ ರೀತಿ ರಸ್ತೆ ಕೆಲಸವನ್ನೂ ಸಹ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಚಾಸಾ–14 ಮತ್ತು 15 ರವರು ಸಂಬಂಧಿಕರು ಎಂದರೆ ಸರಿ, ಅವರು ಯಾವಾಗಲೂ ಆರೋಪಿಯ ಮೇಲೆ ದ್ವೇಷ ಸಾಧಿಸುತ್ತಿದ್ದರು ಎಂದರೆ ಸರಿಯಲ್ಲ.

9. ಮೃತ ಮತ್ತು ಚಾಸಾ–10, 15 ರವರು ಸಂಬಂಧಿಕರಲ್ಲ ಎಂದರೆ ಸರಿ. ಎಂ.ಓ.–11 ಮೊಬೈಲ್‌ನಲ್ಲಿ ಯಾವ ಸಿಮ್ ಬಳಕೆಯಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಎಂ.ಓ.–11 ಮೊಬೈಲ್ ನಲ್ಲಿರುವ ದೃಶ್ಯಾವಳಿಯನ್ನು ಸೃಷ್ಠಿಸಿ, ಅದರ ಆಧಾರದ ಮೇಲೆ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ–1, 19, 13, 14, 10, 15, 18, 20 ರಿಂದ 25 ರವರು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎಂ.ಓ.–1, 3, 5, 6, 8, 9 ಮತ್ತು 10 ಗಳನ್ನು ಘಟನಾ ಸ್ಥಳ ಎಂದು ಹೇಳಲಾದ ಜಾಗದ ಹತ್ತಿರದಲ್ಲಿರುವ ಸ್ಮಶಾನದಲ್ಲಿ ಬಿದ್ದಂತಹ ವಸ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ಸಧೃಡ ವ್ಯಕ್ತಿ ಎಂದರೆ ಸರಿ. ಮೃತ ಅಬುತಾಲಿಬ್ ತನ್ನ 1 ನೇ ಹೆಂಡತಿಗೆ ಕಿರುಕುಳ ನೀಡಿ ವಿಚ್ಛೇಧನೆ ನೀಡಿದ್ದರಿಂದ ಆಕೆಯ ಸಂಬಂಧಿಕರು ಮೃತನ ಮೇಲೆ ದ್ವೇಷ ಸಾಧಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜನಾಂಗದವರು ಪ್ರತಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಮಸೀದಿಗೆ ಹೋಗುತ್ತಾರೆ ಎಂದರೆ ಸರಿ. ದಿನಾಂಕ 03.05.2021 ಸೋಮವಾರ ಎಂದರೆ ನನಗೆ ಗೊತ್ತಿಲ್ಲ. ಚಾ.ಸಾ.14 ರವರು ಆರೋಪಿತನ ವಿರುದ್ಧ ನೀಡಿದ ದೂರಿನಲ್ಲಿ ಏನು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ಯಾವಾಗಲು ತನ್ನ ಬಳಿ ಚಾಕು ಹಿಡಿದುಕೊಂಡು ಓಡಾಡುತ್ತಿದ್ದ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ಎದುರಿನಲ್ಲಿ ಆರೋಪಿ ಮೃತನಿಗೆ ಚಾಕುವಿನಿಂದ ಚುಚ್ಚಿಲ್ಲ ಎಂದರೆ ಸರಿಯಲ್ಲ.

10. ಹೊನ್ನಾವರ ಪೊಲೀಸರು ಕ್ಯಾಮರಾದಿಂದ ನನ್ನ ಮತ್ತು ಚಾ.ಸಾ.12 ರವರ ಭಾವಚಿತ್ರಗಳನ್ನು ತೆಗೆದಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು,ಚಾ.ಸಾ.1, ಚಾ.ಸಾ.10, ಚಾ.ಸಾ.11, ಚಾ.ಸಾ.14 ಮತ್ತು ಚಾ.ಸಾ.15 ರವರು ಸೇರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.